# ::: ಪೂರಕ ಟಿಪ್ಪಣಿ :::

ಕರ್ನಾಟಕ ನಗರಾಭಿವೃದ್ಧಿಪ್ರಾಧಿಕಾರಗಳ ಅಧಿನಿಯಮ 1987ರ ಪ್ರಕರಣ 43 ರ ಅನ್ವಯ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2013- 14 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

## ಆದಾಯ:–

### ಸಾಮಾನ್ಯ ಶಾಖೆ

**2013 - 14** ನೇ ಸಾಲಿನ **01-04-2012** ಕ್ಕೆ ಆರಂಭಿಕ ಶಿಲ್ಕು ರೂ.**3,67,75,842-00** ಗಳಾಗಿದ್ದು ಪ್ರಾಧಿಕಾರವು ಕಂದಾಯ ವಸೂಲಿ ಮಾಡುವುದರಿಂದ, ಕರ್ನಾಟಕ ನಗರಾಭಿವೃದ್ಧಿಪ್ರಾಧಿಕಾಗಳ (ನಿವೇಶನ ಹಂಚಿಕೆ) ನಿಯಮಗಳು 1991 ರ ಪ್ರಕರಣ 19 (5) ರ ಅನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ : 248 : ಎಂಎನ್‌ಎಲ್ 97 ದಿನಾಂಕ: 12-05-2000 ರ ಅನ್ವಯ ದಿನಾಂಕ: 27-01-07 ರಂದು ನಡೆದ ಪ್ರಾಧಿಕಾರದ ಸಭೆಯ ತೀರ್ಮಾನದಂತೆ, 2006 ರ ವರ್ಷದಿಂದ ಪ್ರಾರಂಭವಾಗಿ ನಿಗದಿತ ಅವದಿ ಒಳಗೆ ನಿವೇಶನ ಹಂಚಿಕೆ ಪಡೆದವರು ಕಟ್ಟಡವನ್ನು ಕಟ್ಟದಿದ್ದವರಿಗೆ ಕಾಲಾವಧಿ ವಿಸ್ತರಿಸಲು ದಂಡ ಶುಲ್ಕವನ್ನು ವಿಧಿಸುವುದರಿಂದ, ಪ್ರಾಧಿಕಾರದಿಂದ ಅನ್ಯಕ್ರಾಂತಕ್ಕೆ ಅಭಿಪ್ರಾಯ ನೀಡುವುದರಿಂದ, ವಿನ್ಯಾಸ ಅನುಮೋದನೆ ನೀಡುವುದರಿಂದ, ಸುಧಾರಣಾ ಶುಲ್ಕ, ಪರಿಶೋಧನಾ ಶುಲ್ಕ, ಮತ್ತು ಇತರೆ ಮೂಲಗಳಿಂದ ಬರುವ ಸಾಮಾನ್ಯ ಆದಾಯದ ಅಂದಾಜು ರೂ. **4,28,10,000=00** ಗಳಷ್ಟು ಆದಾಯದ ನಿರೀಕ್ಷೆ ಇರುತ್ತದೆ.

### ಬಂಡವಾಳ ಶಾಖೆ ಆದಾಯ:–

ಪ್ರಾಧಿಕಾರವು ಹಿರೇಮಗಳೂರು ಗ್ರಾಮದ ಸರ್ವೆ ನಂ.321 ಮತ್ತಿತರೆ ಸರ್ವೆ ನಂಬರುಗಳಲ್ಲಿನ 17 ಎ – 37½ ಗುಂಟೆ, ಜಮಿನಿನಲ್ಲಿ ವಸತಿ ಯೋಜನೆಗೆ ಸರ್ಕಾರದ ಪತ್ರದ ನಂ. ನಅಇ : 427 : ಮೈಅಪ್ರಾ : 2005 ದಿನಾಂಕ: 15-04-2006, 08-06-2006 ಮತ್ತು 05-01-2009 ರಂತೆ ರೂ. 4,70,36,885.00 (ನಾಲ್ಕು ಕೋಟಿ ಎಪ್ಪತ್ತು ಲಕ್ಷದ ಮೂವತ್ತಾರು ಸಾವಿರದ ಎಂಟುನೂರ ಎಂಬತ್ತೈದು ರುಪಾಯಿ) ಗಳ ಅಂದಾಜು ವೆಚ್ಚದಲ್ಲಿ ವಸತಿ ಯೋಜನೆ ಕಾರ್ಯಗತಗೊಳಿಸುವಂತೆ ಪರಿಷ್ಕೃತ ವಸತಿ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಕಲಂ 19 (5) ರನ್ವಯ ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯಲಾಗಿರುತ್ತದೆ, ಮತ್ತು ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿ 193 ಎ – 17 ಗುಂಟೆ, ಪ್ರದೇಶದಲ್ಲಿ ಅಭಿವೃದ್ಧಿಪಡಿಸುತ್ತಿರುವ ಶ್ರೀ ಎ. ಬಿ. ವಾಜಪೇಯಿ ವಸತಿ ಬಡಾವಣೆ ಈ ಎರಡು ಬಡಾವಣೆಗಳಲ್ಲಿ ನಿವೇಶನ ರಚಿಸಿ ಹಂಚಿಕೆ ಮಾಡುವುದರಿಂದ ಮತ್ತು ನಾಗರೀಕ ಸೌಕರ್ಯದ ನಿವೇಶನಗಳನ್ನು ಹಂಚಿಕೆ ಮಾಡುವುದರಿಂದ ಬರುವ ಆದಾಯವು ಸೇರಿದಂತೆ ಬಂಡವಾಳ ಶಾಖೆಯ ಒಟ್ಟು ಆದಾಯ ರೂ.**72,30,70,000=00** ಗಳಾಗಲಿದ್ದು ಆರಂಭದ ಶಿಲ್ಕು ಸೇರಿದಂತೆ ಸಾಮಾನ್ಯ ಶಾಖೆ ಮತ್ತು ಬಂಡವಾಳ ಶಾಖೆಯ ಒಟ್ಟು ಆದಾಯ ರೂ.**80,26,55,842=00** ಗಳಾಗುವ ನಿರೀಕ್ಷೆ ಇದೆ.

## ಖರ್ಚು :–

### ಸಾಮಾನ್ಯ ಶಾಖೆ:–

ಪ್ರಾಧಿಕಾರದ ಸಿಬ್ಬಂದಿ ವರ್ಗದವರ ವೇತನ, ಅಧ್ಯಕ್ಷರ ಗೌರವಧನ ಸದಸ್ಯರುಗಳ ಸಭಾ ಭತ್ಯೆ, ಲಘು ಉಪಹಾರ, ಪ್ರಾಧಿಕಾರದ ನೌಕರರ ನಿವೃತ್ತಿ ವೇತನದ ವಂತಿಕೆ, ಪ್ರಯಾಣ ಭತ್ಯೆ, ಲೇಖನ ಸಾಮಾಗ್ರಿ, ಪ್ರಕಟಣೆ, ಜಾಹಿರಾತು, ಸಾದನ ಸಲಕರಣೆಗಳ ಖರೀದಿ, ಕಾರಿಗೆ / ಜೀಪಿಗೆ ಡೀಸಲ್ ಆಯಿಲ್ ಖರೀದಿ, ದುರಸ್ಥಿ, ವಿಮೆ, ದೂರವಾಣಿ ವೆಚ್ಚ, ವಿದ್ಯುತ್ ಉಪಕರಣಗಳ ಖರೀದಿ ಮತ್ತು ಬಿಲ್ ಪಾವತಿ, ದಿನಪತ್ರಿಕೆ ಕೊಳ್ಳುವುದು, ಮತ್ತಿತರೆ ಬಾಬುಗಳಿಗಾಗಿ ಒಟ್ಟು ಸಾಮಾನ್ಯ ಶಾಖೆಯ ಖರ್ಚು ರೂ. **95,30,000=00** ಗಳಾಗುವ ನಿರೀಕ್ಷೆ ಇದೆ.

.. 2 ...

**<u>ಬಂಡವಾಳ ಶಾಖೆ:-</u>**

**ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ರ ಅಧಿನಿಯಮದನ್ವಯ ಯೋಜನೆ ಕೈಗೊಳ್ಳುವುದರ ಸಲುವಾಗಿ, ಹಿರೇಮಗಳೂರು ಗ್ರಾಮದ ಸರ್ವೆ ನಂ.321, 322, 323, 325, ಮತ್ತಿತರೆ ಸರ್ವೆ ನಂಬರುಗಳಲ್ಲಿನ 17 ಎಕರೆ 37½ ಗುಂಟೆ ಜಮೀನಿನಲ್ಲಿ ನಿವೇಶನ ಯೋಜನೆಯ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ, ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿ 193 ಎ – 19 ಗುಂಟೆ, ಪ್ರದೇಶದಲ್ಲಿ ಅಭಿವೃದ್ಧಿಪಡಿಸುತ್ತಿರುವ ಶ್ರೀ ಎ. ಬಿ. ವಾಜಪೇಯಿ ವಸತಿ ಬಡಾವಣೆ ರಚನೆ ಹಾಗೂ ಹೊಸ ನಿವೇಶನ ಯೋಜನೆ ರೂಪಿಸಲು ಭೂಸ್ವಾಧೀನ ವೆಚ್ಚ, ವಸತಿ ಬಡಾವಣೆಯ ಸ್ವಚ್ಛತೆ ಕಾಪಾಡುವುದು, ಹಳೆ ರಸ್ತೆ ದುರಸ್ಥಿ, ಚರಂಡಿ ನಿರ್ಮಾಣ ಮತ್ತು ದುರಸ್ಥಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಗರ ಸಭಾ ವ್ಯಾಪ್ತಿಯಲ್ಲಿನ ನಗರದ ಒಳಭಾಗದಲ್ಲಿ ರಸ್ತೆ ಚರಂಡಿ ಮತ್ತಿತರೆ ನಾಗರೀಕ ಸೌಲಭ್ಯವನ್ನು ಕಲ್ಪಿಸಿ ವ್ಯವಸ್ಥಿತವಾಗಿ ಅಭಿವೃದ್ದಿ ಪಡಿಸುವುದು, ಪ್ರಾಧಿಕಾರದ ವತಿಯಿಂದ ನಗರದ ವಿವಿಧ ಭಾಗಗಳಲ್ಲಿ ಮೂರು ಬಸ್ ಶೆಲ್ಟರ್ ಹಾಗೂ ಒಂದು ಸರ್ಕಲ್ ನಿರ್ಮಾಣ, ನಗರಕ್ಕೆ ಹಾದು ಹೋಗುವ ರಸ್ತೆಗಳಲ್ಲಿ ಐದು ಕಡೆ ಸ್ವಾಗತ ಕಮಾನುಗಳ ನಿರ್ಮಾಣ, ಹಾಗೂ ವಿವಿದ ಕಾಮಗಾರಿಗಳನ್ನು ನಿರ್ವಹಿಸಲು ವಸತಿ ಯೋಜನೆ ಕಾರ್ಯಗಳಿಗಾಗಿ ಭೂಸ್ವಾಧೀನ ಪಡಿಸಿಕೊಳ್ಳುವುದು ಹಾಗೂ ಹೊಸ ಕಾರು ಖರೀದಿಗಾಗಿ ಮತ್ತಿತರೆ ಬಾಬುಗಳಿಗಾಗಿ ಒಟ್ಟು ಖರ್ಚು ರೂ.95,30,00,000=00 ಗಳಾಗಲಿದ್ದು ಸಾಮಾನ್ಯ ಶಾಖೆ ಮತ್ತು ಬಂಡವಾಳ ಶಾಖೆಯ ಒಟ್ಟು ಖರ್ಚು ರೂ.75,31,80,000=00 ಗಳಾಗುವ ನಿರೀಕ್ಷೆ ಇದೆ.**

| | | |
|---|---|---|
| **ಆರಂಭದ ಶಿಲ್ಕು** | **... ... ...** | **ರೂ. 3,67,75,842=00** |
| **2013 - 14 ನೇ ಸಾಲಿನ ಅಂದಾಜು ಆದಾಯ** | **... ... ...** | **ರೂ. <u>76,58,80,000=00</u>** |
| **ಒಟ್ಟು** | | **ರೂ. 80,26,55,842=00** |
| **2013 - 14 ನೇ ಸಾಲಿನ ಅಂದಾಜು ಖರ್ಚು** | **... ... ...** | **ರೂ. <u>75,31,80,000=00</u>** |
| **ಉಳಿತಾಯ (ಅಂತ್ಯದ ಶಿಲ್ಕು)** | **... ... ...** | **ರೂ. 4,94,75,842=00.** |

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.